**ದಿನಾಂಕ 02-06-2026 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಶ್ರೀ.ಎಮ್.ಎಮ್.ಟಿ ವಕೀಲರಿಂದ ವಾದಿ ಪರವಾಗಿ**

1.ವಾದಿ ಶ್ರಾವಣಿ ಮತ್ತು ಪ್ರತಿವಾದಿಗಳಾದ ನಿಮ್ಮ ಮೂಲಪುರುಷ ಶಂಕ್ರೆಪ್ಪ ಮುದಕಪ್ಪ ಒಡೆಯರ ಎಂದರೆ ಸರಿ. ಸಾಕ್ಷಿ ಮುಂದುವರೆದು ವಾದಿ ನನ್ನ ತಂದೆಯ ಕಿರಿಯ ಸಹೋದರ ಬಸಪ್ಪ ಅವರ ಮಗಳು ಅಲ್ಲ ಎಂದು ಹೇಳುತ್ತಾರೆ. ಶಂಕ್ರೆಪ್ಪ ಇವರಿಗೆ ಸಿದ್ದಪ್ಪ ಮತ್ತು ಬಸಪ್ಪ ಎಂದು ಇಬ್ಬರು ಮಕ್ಕಳು ಎಂದರೆ ಸರಿ. ನಿಮ್ಮ ತಂದೆ ಸಿದ್ದಪ್ಪ ಇವರ ಹೆಂಡತಿ 2 ನೇ ಪ್ರತಿವಾದಿ ಮಹಾದೇವಿ ಎಂದರೆ ಸರಿ. ನೀವು, ಪ್ರತಿವಾದಿ-4 ಸುಧಾ ಮತ್ತು ಜೋತೆಪ್ಪ ಇವರು ಮಕ್ಕಳು ಎಂದರೆ ಸರಿ. ಜೋತೆಪ್ಪ ಇವರು ಅವಿವಾಹಿತರಾಗಿ ತೀರಿಕೊಂಡಿದ್ದಾರೆ ಎಂದರೆ ಸರಿ. ಬಸಪ್ಪ ಇವರಿಗೆ ಶೋಭಾ ಅಲಿಯಾಸ ಸುನಂದಾ ಇವರು ಹೆಂಡತಿ ಎಂದರೆ ಸಾಕ್ಷಿ ಅವರಿಬ್ಬರ ನಡುವೆ 2014 ರಲ್ಲಿ ವಿವಾಹ ವಿಚ್ಛೇದನೆ ಆಗಿದೆ ಎಂದು ಹೇಳುತ್ತಾರೆ. ವಾದಿ ಶ್ರಾವಣಿ ಇವಳು ಬಸಪ್ಪ ಮತ್ತು ಶೋಭಾ ಇವರ ಮಗಳು ಎಂದರೆ ಸರಿಯಲ್ಲ. ವಾದಿಯ ತಂದೆ ಬಸಪ್ಪ ಇವರು ದಿಃ10.11.2018 ರಂದು ತೀರಿಕೊಂಡಿದ್ದಾರೆ ಎಂದರೆ ವಾದಿಯ ತಂದೆ ಬಸಪ್ಪ ಅಲ್ಲ ಮತ್ತು ಅವರ ಮರಣ ದಿಃ10.11.2019 ಎಂದು ಸಾಕ್ಷಿ ಹೇಳುತ್ತಾರೆ. ಬಸಪ್ಪ ಅವರು ಯಾವ ಕಾರಣದಿಂದ ತೀರಿಕೊಂಡರು ಎಂದು ನನಗೆ ಗೊತ್ತಿದೆ. ಅವರಿಗೆ ಲಿವರ ತೊಂದರೆ ಇತ್ತು ಎಂದು ಸಾಕ್ಷಿ ಹೇಳುತ್ತಾರೆ.

2.ಸಾಕ್ಷಿಗೆ ಈಗ ಶೆಡ್ಯೂಲ್-ಬಿ ಮತ್ತು ಸಿ ಆಸ್ತಿಗಳನ್ನು ಓದಿ ಹೇಳಿದ್ದು ಅವು ಮೂಲತಃ ಶಂಕ್ರೆಪ್ಪ ಅವರಿಗೆ ಹಿರಿಯರಿಂದ ಬಂದ ಆಸ್ತಿಗಳು ಎಂದರೆ ಸರಿ. ದಾವಾ ಆಸ್ತಿಗಳು 1988 ರಲ್ಲಿ ಶಂಕ್ರೆಪ್ಪ ಮತ್ತು ಅವರ ಸಹೋದರ ಸದಾಶಿವ ಇವರ ನಡುವೆ ಆದ ವಿಭಾಗದಲ್ಲಿ ಶಂಕ್ರೆಪ್ಪ ಅವರ ಪಾಲಿಗೆ ಬಂದವು ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ಮುಟೇಶನ ಎಂಟ್ರಿ ಸಂಖ್ಯೆ 1865 ದಾಖಲಾಯಿತು ಎಂದರೆ ಸರಿ. ಶಂಕ್ರೆಪ್ಪ ಅವರು ದಿಃ23.12.2001 ರಂದು ತೀರಿಕೊಂಡ ನಂತರ ಅವರ ಮಕ್ಕಳಾದ ಸಿದ್ದಪ್ಪ ಮತ್ತು ಅವರ ಸಹೋದರ ಬಸಪ್ಪ ಇವರು ಅದಕ್ಕೆ ವಾರಸುದಾರರು ಆದರೂ ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ಡೈರಿ ಸಂಖ್ಯೆ 2482 ದಾಖಲಾಯಿತು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನೀವು, ವಾದಿ ಮತ್ತು ಆಕೆಯ ತಾಯಿ ಸೇರಿ ಸಾಗುವಳಿ ಮಾಡುತ್ತೀರಿ ಎಂದರೆ ನಾವು ಒಬ್ಬರೇ ಸಾಗುವಳಿ ಮಾಡುತ್ತೇವೆ ಎಂದು ಸಾಕ್ಷಿ ಹೇಳುತ್ತಾರೆ. ಶಂಕ್ರೆಪ್ಪ ಅವರ ಹೆಂಡತಿ ಹಣಮವ್ವ ಇವರು 2005 ರಲ್ಲಿ ತೀರಿಕೊಂಡಿದ್ದಾರೆ.

3.ಬಸಪ್ಪ ಮತ್ತು ಶೋಭಾ ಅವರ ಮದುವೆ ದಿಃ27.04.2001 ರಂದು ಆಗಿದೆ ಎಂದರೆ ದಿನಾಂಕ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಮದುವೆ ಆದ ನಂತರ ಶೋಭಾ ಇವರು ಬಸಪ್ಪ ಅವರೊಂದಿಗೆ ವೈವಾಹಿಕ ಜೀವನ ನಡೆಸಲು ಬಿದರಿ ಗ್ರಾಮಕ್ಕೆ ಬಂದರು ಎಂದರೆ ಸರಿ. ನೀವು ನಿಮ್ಮ ತಂದೆ-ತಾಯಿ ಶೋಭಾ ಇವರಿಗೆ ದಿನನಿತ್ಯ ಮಾನಸಿಕ ಮತ್ತು ದೈಹಿಕ ತೊಂದರೆ ನೀಡುತ್ತಿದ್ದೀರಿ ಎಂದರೆ ಸರಿಯಲ್ಲ. ಸುನಂದಾ ಇವರು ನೀವು ಎಷ್ಟೆ ತೊಂದರೆ ನೀಡಿದರು ಸಹ ಬಸಪ್ಪ ಅವರೊಂದಿಗೆ ವೈವಾಹಿಕ ಜೀವನ ನಡೆಸುತ್ತಿದ್ದರು ಎಂದರೆ ವೈವಾಹಿಕ ಜೀವನ ನಡೆಸಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಬಸಪ್ಪ ಅವರ ಪಾಲಿಗೆ ಬರುವ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನೀವು ಬಸಪ್ಪ ಮತ್ತು ಶೋಭಾ ಇವರಿಗೆ ವೈವಾಹಿಕ ಜೀವನ ನಡೆಸಲು ನೀಡಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಶೋಭಾ ಇವರಿಗೆ ಅನೈತಿಕ ಸಂಬಂಧ ಇತ್ತು ಎಂದು ಹೇಳುತ್ತಾರೆ. ಬಸಪ್ಪ ಇವರಿಗೆ ದುಶ್ಚಟಗಳು ಇದ್ದವು ಎಂದರೆ ಸರಿಯಲ್ಲ. ಬಸಪ್ಪ ಇವರು ಎಮ್.ಸಿ ಸಂಖ್ಯೆ 35/2013 ನ್ನು ವಿವಾಹ ವಿಚ್ಛೇದನ ಕೋರಿ ಶೋಭಾ ಅವರ ವಿರುದ್ದ ನೀವು ಸಲ್ಲಿಸುವಂತೆ ಮಾಡಿದ್ದೀರಿ ಎಂದರೆ ವಿವಾಹ ವಿಚ್ಛೇದನ ಕೋರಿ ಬಸಪ್ಪ ಅವರು ಸಲ್ಲಿಸಿದ್ದು, ನಾವು ಸಲ್ಲಿಸುವಂತೆ ಮಾಡಿಲ್ಲ ಎಂದು ಹೇಳುತ್ತಾರೆ. ಸದರಿ ವಿವಾಹ ವಿಚ್ಛೇದನ ಪ್ರಕರಣದಲ್ಲಿ ಸುನಂದಾ ಇವರು ತಮ್ಮ ವಕೀಲರ ಮೂಲಕ ಹಾಜರಾದರು ಎಂದರೆ ಸರಿ. ಗಂಡ ಹೆಂಡತಿಯ ನಡುವೆ ಸಂಬಂಧ ಚೆನ್ನಾಗಿ ಇದ್ದ ಕಾರಣ ಊರ ಹಿರಿಯರ ನಿರ್ದೇಶನದಂತೆ ಸದರಿ ಪ್ರಕರಣವನ್ನು ಹಿಂಪಡೆಯುತ್ತೀರಿ ಎಂದು ನೀವು ಭರವಸೆ ನೀಡಿದ್ದೀರಿ ಎಂದರೆ ಸರಿಯಲ್ಲ. ಆದ್ದರಿಂದ ವಾದಿಯ ತಾಯಿ ಸುನಂದಾ ಇವರು ಸದರಿ ಪ್ರಕರಣವನ್ನು ನಡೆಸಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಹಾಜರ ಆಗಲಿಲ್ಲ ಎಂದು ಹೇಳುತ್ತಾರೆ. ನೀವು ವಾದಿಯ ತಾಯಿ ಸುನಂದಾ ಇವರಿಗೆ ಗೊತ್ತಾಗದಂತೆ ದಿಃ27.03.2014 ರಂದು ವಿವಾಹ ವಿಚ್ಛೇದನ ಡಿಕ್ರಿಯನ್ನು ಪಡೆದುಕೊಂಡಿರಿ ಎಂದರೆ ಸರಿಯಲ್ಲ. ನೀವು ಹಿರಿಯರ ಸಮಕ್ಷಮ ಪ್ರಕರಣ ಹಿಂಪಡೆಯುತ್ತೀರಿ ಎಂದು ಹೇಳಿದ್ದರಿಂದ ವಾದಿಯ ತಾಯಿ ಸುನಂದಾ ಇವರು ಪ್ರಕರಣದಲ್ಲಿ ಹಾಜರಾಗಲಿಲ್ಲ ಮತ್ತು ಅದನ್ನು ದುರುಪಯೋಗಪಡಿಸಿಕೊಂಡು ವಿವಾಹ ವಿಚ್ಛೇದನ ಪಡೆದುಕೊಂಡಿರಿ ಎಂದರೆ ಸರಿಯಲ್ಲ.

4.ತಾವು ಅಸಲು ದಾವಾ ಸಂಖ್ಯೆ 128/2018 ನ್ನು ಪ್ರತಿವಾದಿಳಾದ ನೀವೆಲ್ಲರೂ ಸೇರಿ ವಾದಿಯ ಹಕ್ಕನ್ನು ಕಬಳಿಸುವ ಉದ್ದೇಶದಿಂದ ದಾಖಲಿಸಿ, ಅದರಲ್ಲಿ ಸುಳ್ಳು ಡಿಕ್ರಿಯನ್ನು ಪಡೆದುಕೊಂಡಿರಿ ಎಂದರೆ ಸರಿಯಲ್ಲ. ನೀವು ಸದರಿ ಅಪಸಾತ ಡಿಕ್ರಿಯಲ್ಲಿ ಬಸಪ್ಪ ಇವರ ಪಾಲಿಗೆ 2 ಲಕ್ಷ ರೂಪಾಯಿ ನಗದು ಮತ್ತು 3 ಲಕ್ಷ 50 ಸಾವಿರ ರೂಪಾಯಿ ವೈದ್ಯಕೀಯ ವೆಚ್ಚ ನೀಡಿದ್ದೀರಿ ಎಂದು

ಸುಳ್ಳು ನಮೂದಿಸಿ, ಎಲ್ಲಾ ಆಸ್ತಿಗಳನ್ನು ನಿಮ್ಮ ಹೆಸರಿಗೆ ಬರೆಯಿಸಿಕೊಂಡಿರಿ ಎಂದರೆ ಸರಿಯಲ್ಲ. ಅಪಸಾತ ಡಿಕ್ರಿಯಲ್ಲಿ ಬಸಪ್ಪ ಇವರಿಗೆ ಹೆಂಡತಿ ಮಕ್ಕಳು ಇರುವುದಿಲ್ಲ ಎಂದು ಸುಳ್ಳು ನಮೂದಿಸಿದ್ದೀರಿ ಎಂದರೆ ಸರಿಯಲ್ಲ. ಬಸಪ್ಪ ಅವರಿಗೆ ದಾವಾ ಆಸ್ತಿಗಳಲ್ಲಿ ಇದ್ದ ಹಕ್ಕನ್ನು ಪ್ರತಿವಾದಿಳಾದ ನಿಮ್ಮ ಹೆಸರಿಗೆ ಖೊಟ್ಟಿ ರೀತಿಯಿಂದ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ.

5.ಬಸಪ್ಪ ಅವರು ತೀರಿಕೊಂಡ ನಂತರ ವಾದಿಯ ತಾಯಿ ಶೋಭಾ ಮತ್ತು ವಾದಿ ಇವರು ಮೇಲ್ಮನವಿ ಸಂಖ್ಯೆ 182/2018 ರಂತೆ ಮಾನ್ಯ ಜಿಲ್ಲಾ ನ್ಯಾಯಾಲಯ ಜಮಖಂಡಿಯಲ್ಲಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಬಸಪ್ಪ ಇವರ ಮಗಳು ಶ್ರಾವಣಿ ಇವಳು ಪ್ರತ್ಯೇಕ ದಾವೆಯನ್ನು ಸಲ್ಲಿಸಬಹುದು ಎಂದು ಉಲ್ಲೇಖಿಸಿದ್ದರಿಂದ ವಾದಿ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಡಿ.ಎನ್.ಎ ಬಗ್ಗೆ ಯಾವುದೇ ನಮೂದು ಮಾಡಿರಲಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾದ ಕಾರಣ ವಾದಿ ಶ್ರಾವಣಿ ಇವರಿಗೂ ಸಹ ಆಕೆಯ ತಂದೆ ಬಸಪ್ಪ ಇವರಿಗೂ ಹಿಸ್ಸೆಯಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ.

6.ನೀವು ಹಾಜರಪಡಿಸಿದ ನಿಡಿ-9 ವೈದ್ಯಕೀಯ ಬಿಲ್ಲುಗಳು ಬಸಪ್ಪ ಎಸ್ ವಾಲೀಕಾರ ಎನ್ನುವವರಿಗೆ ಸಂಬಂಧಪಟ್ಟ ದಾಖಲಾತಿಗಳು ಎಂದರೆ ಸರಿಯಲ್ಲ. ಆ ರೀತಿ ನಿಡಿ-10 ದಾಖಲಾತಿಯಲ್ಲಿ ನಮೂದು ಇದೆ ಎಂದರೆ ಸಾಕ್ಷಿಯು ಆ ರೀತಿ ಬೆರಳಚ್ಚು ಮಾಡುವುದರಲ್ಲಿ ತಪ್ಪಾಗಿರಬಹುದು ಎಂದು ಹೇಳುತ್ತಾರೆ. ನಿಡಿ-10 ದಾಖಲಾತಿ ಇದು ಮೆದುಳಿಗೆ ಸಂಬಂಧಿಸಿದಂತೆ ಪಡೆದ ವರದಿ ಆಗಿದೆ ಎಂದರೆ ಸಾಕ್ಷಿಯು ಬಸಪ್ಪ ಇವರಿಗೆ ಮೂರ್ಛೆ ಬರುತ್ತಿದ್ದು, ಆದ್ದರಿಂದ ಅವರು ಮಾತ್ರೆಗಳನ್ನು ತೆಗೆದುಕೊಳ್ಳುತ್ತಿದ್ದು, ಅದರ ಪರಿಣಾಮವಾಗಿ ಲೀವರ ತೊಂದರೆ ಆಯಿತು ಎಂದು ಹೇಳುತ್ತಾರೆ. ನೀವು ಹಾಜರಪಡಿಸಿದ ಉಳಿದ ವೈದ್ಯಕೀಯ ದಾಖಲಾತಿಗಳಲ್ಲಿ ಕೇವಲ ಬಸಪ್ಪ ಎಂದು ನಮೂದು ಇದೆ ಎಂದರೆ ಸರಿಯಲ್ಲ. ನೀವು ಹಾಜರಪಡಿಸಿದ ವೈದ್ಯಕೀಯ ದಾಖಲಾತಿಗಳು ಬಸಪ್ಪ ವಾಲೀಕಾರ ಅವರಿಗೆ ಸಂಬಂಧಿಸಿದ್ದು, ಅವುಗಳನ್ನು ಈ ಪ್ರಕರಣದಲ್ಲಿ ಅನುಕೂಲವಾಗುವಂತೆ ಹಾಜರಪಡಿಸಿದ್ದೀರಿ ಎಂದರೆ ಸರಿಯಲ್ಲ. ಬಸಪ್ಪ ಇವರಿಗೆ ನೀವು 2 ಲಕ್ಷ ರೂಪಾಯಿ ನಗದು ನೀಡಿಲ್ಲ ಮತ್ತು 3 ಲಕ್ಷ 50 ಸಾವಿರ ರೂಪಾಯಿ ಆಸ್ಪತ್ರೆ ವೆಚ್ಚ ಸಹ ಮಾಡಿಲ್ಲ ಎಂದರೆ ಸರಿಯಲ್ಲ. ಬಸಪ್ಪ ಈತನ ಲಿವರ ತೊಂದರೆ ಇದ್ದ ಕಾರಣ ಆತ ತೀರಿಕೊಳ್ಳುತ್ತಾನೆ ಎಂದು ಮತ್ತು ತದನಂತರ ಆತನ ಪಾಲಿನ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ರೀತಿಯಿಂದ ದಾವೆ ಸಲ್ಲಿಸಿ, ಸುಳ್ಳು ಅಪಾಸತ ಡಿಕ್ರಿ ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಆದ ಕಾರಣ

**ಡಿ.ಡಬ್ಲ್ಯೂ - 1**

ಅವುಗಳಲ್ಲಿ ವಾದಿ ಶ್ರಾವಣಿ ಇವರಿಗೂ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿ ಶ್ರಾವಣಿ ಇವರು ಬಸಪ್ಪ ಅವರ ಮಗಳು ಇದ್ದರೂ ಸಹ ಮತ್ತು ಸದರಿ ವಿಷಯ ನಿಮಗೆ ಗೊತ್ತಿದ್ದರೂ ಸಹ ಆಕೆ ಮಗಳು ಅಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಸಲ್ಲಿಸಿದ ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸುಳ್ಳು ವಿಷಯ ನಮೂದಿಸಿ, ಸುಳ್ಳು ದಾಖಲಾತಿ ಹಾಜರಪಡಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ